ಪಿ.ಡಬ್ಲ್ಯು.1

(ಇಂದು ದಿನಾಂಕ 26-07-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ ವಿ.ಆರ್.ಬಿ. ವಕೀಲರಿಂದ–**

ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ದಾವಾ ಸ್ವತ್ತು ಬ ಪರಿಶಿಷ್ಟ ಆಸ್ತಿಗೆ ಸಂಬಂಧಪಟ್ಟ 11 ಫೋಟೋಗಳು ಹಾಗೂ ಸಿ.ಡಿ.ಯನ್ನು ಗುರುತಿಸಲು ಪ್ರತಿವಾದಿ ಪರ ವಕೀಲರು ತಕರಾರು ಸಲ್ಲಿಸಿದ್ದು, ತಕರಾರಿಗೆ ಒಳಪಟ್ಟು ಕ್ರಮವಾಗಿ ನಿ.ಪಿ. 10 ರಿಂದ 21 ಎಂದು, ದಿಃ 01-06-2023 ರಂದು ಕುಮಟಾ ಪೊಲೀಸ್ ಠಾಣೆಯವರು ನೀಡಿದ 2 ಸ್ವಿಕೃತಿಯನ್ನು ಕ್ರಮವಾಗಿ ನಿ.ಪಿ. 22 ಮತ್ತು 23 ಎಂದು ಗುರುತಿಸಲಾಯಿತು. ವಾದಿಯ ಚಿಕ್ಕಪ್ಪನಾದ ವೆಂಕಟೇಶ ನಾರಾಯಣ ಶೇಟ್ ರವರು ವಾದಿಯ ಪರವಾಗಿ ಬರೆದುಕೊಟ್ಟ ವಿಲ್ ನಾಮೆ ಯಾನೆ ಮರಣ ಶಾಸನದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ